<u>ಸಾಕ್ಷಿಯನ್ನು ದಿನಾಂಕಃ 25.9.2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಕೆ ಎಸ್ ಆರ್ ವಕೀಲರಿಂದ</u>

ನಿಪಿ 16 ರ ಇ ಸಿ ನಲ್ಲಿ ಬರೆದಿರುವ ಚೆಕ್ಕುಬಂದಿ ಬಗ್ಗೆ ಗೊತ್ತಿಲ್ಲ. ದಾವಸ್ವತ್ತು ಮತ್ತು ನಿಪಿ 15, 16 ರ ಇಸಿ ಸ್ವತ್ತುಗಳಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ17 ರ ಬ್ಯಾಂಕ್ ಚಲನ್ ನಲ್ಲಿ ನನ್ನ ಗಂಡನ ಹೆಸರು ಮತ್ತು ಖಾತೆ ಸಂಖ್ಯೆ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ18 ರ ವಿದ್ಯುತ್ ಬ್ಯಕ್ತಿ ಬಿಲ್ ಹಾಲಿ ಅರ್ಜಿಯನ್ನು ಹಾಕುವಾಗ ನನ್ನ ಹೆಸರಿನಲ್ಲಿರುತ್ತದೆ. ಹಾಲಿ ಅರ್ಜಿಯನ್ನು ನಿಪಿ18 ರ ವಿದ್ಯುತ್ ಬ್ಯಕ್ತಿ ಬಿಲ್ ನನ್ನ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ19 ರಂತೆ ದಿಃ11.7.25 ರಂದು ನನ್ನ ಗಂಡನ ಹೆಸರಿನಿಂದ ನನ್ನ ಹೆಸರಿಗೆ ವಿದ್ಯುತ್ ಬ್ಯಕ್ತಿ ಮೀಟರ್ ವರ್ಗಾವಣೆ ಆಗಿರುತ್ತದೆ ಎಂದರೆ ಸರಿ. ಎದುರುದಾರರ ಹೆಸರಿನಲ್ಲಿದ್ದ ವಿದುತ್ ಬ್ಯಕ್ತಿ ಮೀಟರ್ ನನ್ನ ಹೆಸರಿಗೆ ವರ್ಗಾವಣೆ ಮಾಡುವಾಗ ಯಾವುದೇ ಎನ್ ಒ ಸಿ ಪಡೆದಿಲ್ಲ. ನಾನು ದಾವಸ್ವತ್ತಿಗೆ ವಿದ್ಯುತ್ ಬ್ಯಕ್ತಿ ಪಡೆದಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿರುತ್ತೇನೆ. ನಾನು ಹೇಳಿದಂತೆ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ18 ರ ದಾಖಲೆಯನ್ನು ವಿದ್ಯುತ್ ಬ್ಯಕ್ತಿ ಇಲಾಖೆಗೆ ಹಣ ಕೊಟ್ಟು ಪಡೆದಿರುತ್ತೇನೆಂದರೆ ಸರಿಯಲ್ಲ. ಎದುರುದಾರರು ವಿದ್ಯುತ್ ಬ್ಯಕ್ತಿ ಇಲಾಖೆಗೆ ಮೇಲೆ ಒಎಸ ನಂ 147/2025 ದಾವೆ ಹಾಕಿರುತ್ತಾರೆಂದರೆ ಸರಿ. ನಿಪಿ15 ರಿಂದ 19 ರ ದಾಖಲೆಗಳನ್ನು ಹಾಲಿ ಅರ್ಜಿಗೆ ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

(ವಿನೋದ್ ಕುಮಾರ್ ಎಂ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಅಪರ ಜೆ.ಎಂ.ಎಫ್.ಸಿ, ಕೆಜಿಎಫ್.